# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 16/3/2021

---

### ಮೇಲ್ಮನೆ ಸದಸ್ಯರಿಗೆ ಶೌಚಾಲಯ ಸಮಸ್ಯೆ!

• ಕನ್ನಡಪ್ರಭ ವಾರ್ತೆ ವಿಧಾನ ಪರಿಷತ್ 15/3/21

ವಿಧಾನ ಪರಿಷತ್ ಸದಸ್ಯರಿಗೆ ಶೌಚಾಲಯದ ಸಮಸ್ಯೆಯಿದ್ದು ಸೂಕ್ತವ್ಯವಸ್ಥೆಮಾಡುವಂತೆಕಾಂಗ್ರೆಸ್‌ಸದಸ್ಯನಾರಾಯಣಸ್ವಾಮಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಸೋಮವಾರ ವಿಧಾನ ಪರಿಷತ್ತಿನಲ್ಲಿ ಸಭಾಪತಿ ಪೀಠದಲ್ಲಿದ್ದ ಉಪಸಭಾಪತಿ ಅವರಿಂದ ಅನುಮತಿ ಪಡೆದು ಮಾತನಾಡಿದ ಅವರು, ಕಳೆದ ಅಧಿವೇಶನದಲ್ಲೇ ಮುಂದಿನ ಅಧಿವೇಶನದ ವೇಳೆಗೆ ಶೌಚಾಲಯ ನಿರ್ಮಾಣದ ಭರವಸೆ ನೀಡಲಾಗಿತ್ತು. ಆದರೆ, ಈವರೆಗೂ ಅದು ಸಾಧ್ಯವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವಿಧಾನ ಪರಿಷತ್ತಿನ ಮೊಗಸಾಲೆಯಲ್ಲಿದ್ದ ಶೌಚಾಲಯವನ್ನು ಉಪಾಹಾರ ಗೃಹವಾಗಿ ಪರಿವರ್ತಿಸಲಾಗಿದೆ. ಹೀಗಾಗಿ ಇರುವ ಒಂದು ಶೌಚಾಲಯವನ್ನು ಸದಸ್ಯರು, ಅಧಿಕಾರಿಗಳು ಸೇರಿದಂತೆ ಎಲ್ಲರೂ ಬಳಸುವಂತಾಗಿದೆ ಎಂದರು. ಇದಕ್ಕೆ ಕಾಂಗ್ರೆಸ್‌ನ ಪ್ರತಾಪ್‌ಚಂದ್ರ ಶೆಟ್ಟಿ ಅವರು ದನಿ ಗೂಡಿಸಿದರು. ಈ ವೇಳೆ ಸಭಾ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಅವರು ಪ್ರತಿಕ್ರಿಯಿಸಿ, ಈ ಹಿಂದೆ ಸದಸ್ಯರಿಗೆ ಶೌಚಾಲಯ ವ್ಯವಸ್ಥೆ ಮಾಡುವ ಭರವಸೆ ನೀಡಲಾಗಿತ್ತು. ಈ ಸಂಬಂಧ ಸಭಾಪತಿ ಅವರೊಂದಿಗೆ ಚರ್ಚಿಸಿ, ವ್ಯವಸ್ಥೆ ಮಾಡುವುದಾಗಿ ಹೇಳಿದರು.